ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,
ಸೋಮವಾರಪೇಟೆ.

**ಉಪಸ್ಥಿತರುಃ ಕೆ.ಗೋಪಾಲಕೃಷ್ಣ,**
**ಬಿ.ಎ.ಎಲ್., ಎಲ್.ಎಲ್.ಬಿ.,**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,ಸೋಮವಾರಪೇಟೆ.**

# ಸಿ.ಸಿ. ನಂ. 161/2023

ಪಿರ್ಯಾದಿಃ ಶ್ರೀ.ಎನ್.ಎಸ್.ಜಯರಾಮ್ ತಂದೆಃ ಪೌತಿ ಸುಬ್ರಾಯ,
ಪ್ರಾಯಃ 55 ವರ್ಷ, ವಾಸಃ ಮಹದೇಶ್ವರ ಬ್ಲಾಕ್,
ಸೋಮವಾರಪೇಟೆ ಪಟ್ಟಣ ಮತ್ತು ತಾಲ್ಲೂಕು,
ಕೊಡಗು ಜಿಲ್ಲೆ.

ಸಾಮಾನ್ಯ ಅಧಿಕಾರ ಪತ್ರದ ಮೂಲಕ ಪ್ರತಿನಿಧಿಸುವವರುಃ

ಬಿ.ಎನ್. ಚೇತನ್ ತಂದೆಃ ಪೌತಿ ನಾರಾಯಣಸ್ವಾಮಿ,
43 ವರ್ಷ, ಬೇಲೂರು ರಸ್ತೆ,
ಸೋಮವಾರಪೇಟೆ ಪಟ್ಟಣ ಮತ್ತು ತಾಲ್ಲೂಕು,
ಕೊಡಗು ಜಿಲ್ಲೆ.

***ವಿರುದ್ಧ***

ಆರೋಪಿಃ ಎಂ.ಮೀನಾ, ಗಂಡಃ ಎಂ.ಜೆ.ಮಂಜುನಾಥ್, 35 ವರ್ಷ,
ಅಕ್ಷಯ ಬೋತಿಕ್, ಗಾಂಧಿ ಸರ್ಕಲ್ ಹತ್ತಿರ,
ಸೋಮವಾರಪೇಟೆ ಪಟ್ಟಣ ಮತ್ತು ತಾಲ್ಲೂಕು,
ಕೊಡಗು ಜಿಲ್ಲೆ.

**::ದಂಡ ಪ್ರಕ್ರಿಯಾ ಸಂಹಿತೆ ವಿಧಿ 313 (1)(ಬಿ) ರಡಿ ದಾಖಲಿಸಿದ ಆರೋಪಿತರ ಹೇಳಿಕೆ ::**

ಪ್ರಶ್ನೆ: 1 ಪಿರ್ಯಾದುದಾರರ ಸಾಕ್ಷ್ಯವನ್ನು ತಿಳಿದುಕೊಂಡಿರುವಿರಾ?

ಉತ್ತರ:

ಪ್ರಶ್ನೆ: 2 ಫ್ರಾಸಾ 1 ಶ್ರೀ.ಬಿ.ಎನ್. ಚೇತನ್‌ರವರು ತಮ್ಮ ಮುಖ್ಯ ವಿಚಾರಣೆಯಲ್ಲಿತಮ್ಮ ಸಾಕ್ಷ್ಯದಲ್ಲಿ ಆರೋಪಿತೆಯಾದ ಎಂ.ಮೀನಾರವರು ಸಾಲ ಕೇಳಿದ್ದು, ನಿಮ್ಮ ಕೋರಿಕೆಯನ್ನು ಪರಿಗಣಿಸಿ ಪಿರ್ಯಾದಿದಾರರು ನಿಮಗೆ ರೂ.8,50,000/- ಗಳನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರ:

ಪ್ರಶ್ನೆ: 3 ಫ್ರಾಸಾ 1 ರವರು ಮುಂದುವರೆದು, ಆರೋಪಿಯಾದ ನೀವು ಅದನ್ನು ತೀರಿಸುವ ಸಲುವಾಗಿ ಕಾರ್ಪೋರೇಷನ್ ಬ್ಯಾಂಕ್, ಸೋಮವಾರಪೇಟೆ ಶಾಖೆಯ ಬ್ಯಾಂಕಿನ ತಮ್ಮ ಖಾತೆಗೆ ಸಂಬಂಧಿಸಿದ ಚೆಕ್ ನಂಬರ್ 628416 ದಿನಾಂಕ: 22.12.2022 ರ ಚೆಕ್ ಅನ್ನು ರೂ.8,50,000/- ಗಳನ್ನು ನೀಡಿರುತ್ತಾರೆ. ಸದರಿ ಚೆಕ್ ಅನ್ನು ನಗದೀಕರಿಸಿಕೊಂಡು ಸಾಲದ ಹಣವನ್ನು ಮರುಪಾವತಿ ಮಾಡಿಕೊಳ್ಳಬೇಕೆಂದು ಆರೋಪಿ ನನಗೆ ತಿಳಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರ:

ಪ್ರಶ್ನೆ: 4 ಫ್ರಾಸಾ 1 ರವರು ಮುಂದುವರೆದು, ನಿಮ್ಮ ಕೋರಿಕೆಯ ಮೇರೆಗೆ ಸದರಿ ಚೆಕ್ ಅನ್ನು ಕಾರ್ಪೋರೇಷನ್ ಬ್ಯಾಂಕ್(ಯೂನಿಯನ್ ಬ್ಯಾಂಕ್), ಸೋಮವಾರಪೇಟೆ ಶಾಖೆಯ ಮೂಲಕ ಸಲ್ಲಿಸಿದಾಗ, ಸದರಿ ಚೆಕ್ "**Refer to Drawer**" ಎಂಬ ಕಾರಣ ನಮೂದಿಸಿ ದಿನಾಂಕ: 06.01.2023 ರಂದು ಬ್ಯಾಂಕ್ ಹಿಂಬರಹದೊಂದಿಗೆ ಹಿಂತಿರುಗಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರ:

ಪ್ರಶ್ನೆಃ 5 ಫ್ರಾಸಾ 1 ರವರು ಮುಂದುವರೆದು, ಚೆಕ್ ಅಮಾನ್ಯಗೊಂಡು ಮರಳಿ ಬಂದ ಬಳಿಕ ದಿನಾಂಕಃ 17.01.2023 ರಂದು ಆರೋಪಿಗೆ ತನ್ನ ವಕೀಲರ ಮೂಲಕ ನೋಂದಾಯಿತ ಅಂಚೆಯಲ್ಲಿ ನೋಟೀಸ್ ಕಳುಹಿಸಿ ಚೆಕ್ ನ ಹಣವನ್ನು ಪಾವತಿ ಮಾಡಬೇಕೆಂದು ತಗಾದೆ ಮಾಡಿರುತ್ತೇನೆ. ಮತ್ತು ಸದರಿ ನೋಟಿಸನ್ನು ಸ್ವೀಕರಿಸಿರುತ್ತೀರಾ. ಆದರೂ ಸಹಾ ಚೆಕ್ ನ ಬಾಬ್ತು ಹಣವನ್ನು ಪಾವತಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆಃ 6 ಫ್ರಾಸಾ 1 ರವರು ಮುಂದುವರೆದು, ನೀವು ಪಿರ್ಯಾದಿಗೆ ವಂಚನೆ ಮಾಡುವ ಉದ್ದೇಶದಿಂದ, ತಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದೇ ಇದ್ದರೂ ಚೆಕ್ ಅನ್ನು ನೀಡಿರುತ್ತಾರೆ ಮತ್ತು ಚೆಕ್ ಹಣವನ್ನು ಪಾವತಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆಃ7ಃ ಫ್ರಾಸಾ-1 ರವರು ಮುಂದುವರಿದು ನೀವು ಖಾತೆಯಲ್ಲಿ ಸಾಕಷ್ಟು ಹಣವನ್ನು ಇಡದೇ ಎನ್.ಐ.ಕಾಯ್ದೆಯಡಿಯಲ್ಲಿ ಅಪರಾಧ ಮಾಡಿರುವುದಾಗಿ ಸಾಕ್ಷ್ಯ ನುಡಿದಿದ್ದಾರೆ. ಇದಕ್ಕೆ ನೀವೇನಾದರೂ ಹೇಳಲು ಇಚ್ಚಿಸುತ್ತೀರಾ?

ಉತ್ತರಃ

ಪ್ರಶ್ನೆಃ8ಃ ನೀವು ಹೇಳುವುದು ಏನಾದರೂ ಇದೆಯೇ?

ಉತ್ತರಃ

ಪ್ರಶ್ನೆಃ9ಃ ನಿಮ್ಮ ಪರವಾಗಿ ಯಾವುದಾದರೂ ಸಾಕ್ಷ್ಯಗಳು ಇವೆಯೇ?

ಉತ್ತರಃ

(ಮೇಲಿನ ಎಲ್ಲಾ ಪ್ರಶ್ನೆಗಳನ್ನು ಆರೋಪಿಗೆ ಓದಿ, ತಿಳಿ ಹೇಳಿದ ನಂತರ ಆರೋಪಿ ಅದನ್ನು ಅರ್ಥೈಸಿಕೊಂಡು ನಂತರ ನೀಡಿದ ಉತ್ತರಗಳನ್ನು ನಾನೇ ಸ್ವತಃ ದಾಖಲು ಮಾಡಿದ್ದೇನೆ. ಸದರಿ ದಾಖಲೆಯು ಸರಿಯಾದುದು ಮತ್ತು ನಿಜವಾದುದು ಎಂದು ದೃಡೀಕರಿಸುತ್ತೇನೆ.)

ಸಹಿ/-

(ಕೆ.ಗೋಪಾಲಕೃಷ್ಣ)

ದಿನಾಂಕಃ 07.09.2023

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ

ಸೋಮವಾರಪೇಟೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,
ಸೋಮವಾರಪೇಟೆ.

**ಉಪಸ್ಥಿತರುಃ ಕೆ.ಗೋಪಾಲಕೃಷ್ಣ,**
**ಬಿ.ಎ.ಎಲ್., ಎಲ್.ಎಲ್.ಬಿ.,**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,ಸೋಮವಾರಪೇಟೆ.**

## ಸಿ.ಸಿ. ನಂ. 161/2023

ಪಿರ್ಯಾದಿಃ ಶ್ರೀ.ಎನ್.ಎಸ್.ಜಯರಾಮ್ ತಂದೆಃ ಪೌತಿ ಸುಬ್ರಾಯ,
ಪ್ರಾಯಃ 55 ವರ್ಷ, ವಾಸಃ ಮಹದೇಶ್ವರ ಬ್ಲಾಕ್,
ಸೋಮವಾರಪೇಟೆ ಪಟ್ಟಣ ಮತ್ತು ತಾಲ್ಲೂಕು,
ಕೊಡಗು ಜಿಲ್ಲೆ.

ಸಾಮಾನ್ಯ ಅಧಿಕಾರ ಪತ್ರದ ಮೂಲಕ ಪ್ರತಿನಿಧಿಸುವವರುಃ

ಬಿ.ಎನ್. ಚೇತನ್ ತಂದೆಃ ಪೌತಿ ನಾರಾಯಣಸ್ವಾಮಿ,
43 ವರ್ಷ, ಬೇಲೂರು ರಸ್ತೆ,
ಸೋಮವಾರಪೇಟೆ ಪಟ್ಟಣ ಮತ್ತು ತಾಲ್ಲೂಕು,
ಕೊಡಗು ಜಿಲ್ಲೆ.

***ವಿರುದ್ಧ***

ಆರೋಪಿಃ ಎಂ.ಮೀನಾ, ಗಂಡಃ ಎಂ.ಜೆ.ಮಂಜುನಾಥ್, 35 ವರ್ಷ,
ಅಕ್ಷಯ ಬೋತಿಕ್, ಗಾಂಧಿ ಸರ್ಕಲ್ ಹತ್ತಿರ,
ಸೋಮವಾರಪೇಟೆ ಪಟ್ಟಣ ಮತ್ತು ತಾಲ್ಲೂಕು,
ಕೊಡಗು ಜಿಲ್ಲೆ.

**::ಆಪಾದನೆಯ ಸಾರಾಂಶ::**

ಆರೋಪಿಯಾದ ನೀವು ಪಿರ್ಯಾದಿದಾರರಿಗೆ ಕೆಲವು ವರ್ಷಗಳಿಂದ ಪರಿಚಯಸ್ಥರಾಗಿದ್ದು, ವ್ಯಾಪಾರದ ಸಲುವಾಗಿ ಪಿರ್ಯಾದಿಯವರಲ್ಲಿ ಸಾಲ ಕೇಳಿದ್ದು, ನಿಮ್ಮ ಕೋರಿಕೆಯನ್ನು ಪರಿಗಣಿಸಿ ಪಿರ್ಯಾದಿದಾರರು ನಿಮಗೆ ರೂ.8,50,000/- ಗಳನ್ನು ನಗದು ರೂಪದಲ್ಲಿ ನೀಡಿದ್ದು, ಆರೋಪಿಯಾದ ನೀವು ಅದನ್ನು ತೀರಿಸುವ ಸಲುವಾಗಿ ಕಾರ್ಪೋರೇಷನ್ ಬ್ಯಾಂಕ್, ಸೋಮವಾರಪೇಟೆ ಶಾಖೆಯ ಬ್ಯಾಂಕಿನ ತಮ್ಮ ಖಾತೆಗೆ ಸಂಬಂಧಿಸಿದ ಚೆಕ್ ನಂಬರ್ 628416 ದಿನಾಂಕಃ 22.12.2022 ರ ಚೆಕ್ ಅನ್ನು ರೂ.8,50,000/- ನೀಡಿದ್ದು, ಪಿರ್ಯಾದಿಯವರು ಸದರಿ ಚೆಕ್ ಅನ್ನು ನಗದೀಕರಿಸುವ ಸಲುವಾಗಿ ಯೂನಿಯನ್ ಬ್ಯಾಂಕ್, ಸೋಮವಾರಪೇಟೆ ಶಾಖೆಯ ಮೂಲಕ ಸಲ್ಲಿಸಿದಾಗ, ಸದರಿ ಚೆಕ್ "**Refer to Drawer**" ಎಂಬ ಕಾರಣ ನಮೂದಿಸಿ ದಿನಾಂಕಃ 06.01.2023 ರಂದು ಬ್ಯಾಂಕ್ ಹಿಂಬರಹದೊಂದಿಗೆ ಅಮಾನ್ಯಗೊಂಡ ಚೆಕ್ ಹಿಂದಿರುಗಿಸಿರುತ್ತಾರೆ. ಚೆಕ್ ನಗದಾಗದೇ ಮರಳಿ ಬಂದ ನಂತರ ಪಿರ್ಯಾದಿ ನಿಮಗೆ ನೋಂದಾಯಿತ ಅಂಚೆಯ ಮೂಲಕ ತಮ್ಮ ವಕೀಲರಿಂದ ದಿನಾಂಕಃ 17.01.2023 ರಂದು ನೋಟೀಸ್ ಕಳುಹಿಸಿ ಚೆಕ್‌ನ ಹಣವನ್ನು ತಮಗೆ ಪಾವತಿಸಬೇಕೆಂದು ತಗಾದೆ ಮಾಡಿರುತ್ತಾರೆ. ಸದರಿ ನೋಟಿಸ್ ನಿಮಗೆ ದಿನಾಂಕ 18.01.2023 ಜಾರಿಯಾಗಿದ್ದರೂ ಸಹ ನೀವು ಚೆಕ್‌ನ ಮೊತ್ತವನ್ನು ಪಿರ್ಯಾದಿಗೆ ಪಾವತಿಸಿರುವುದಿಲ್ಲ ಆ ಮೂಲಕ ನೀವು ವರ್ಗಾವಣೀಯ ಲಿಖಿತಗಳ ಕಾಯಿದೆ 1881 ರ ವಿಧಿ 138 ರ ರೀತ್ಯಾ ದಂಡನೀಯವಾದ ಅಪರಾಧವೆಸಗಿರುವುದಾಗಿ ನಿಮ್ಮ ವಿರುದ್ಧ ಆಪಾದನೆ ಇದೆ.

ಪ್ರಶ್ನೆಃ 1. ಮೇಲೆ ಓದಿ ಹೇಳಿದ ಆಪಾದನೆಯ ಸಾರಾಂಶ ಅರ್ಥವಾಯಿತೆ?

ಉತ್ತರಃ

ಪ್ರಶ್ನೆಃ 2. ಮೇಲೆ ಓದಿ ಹೇಳಿದ ಆಪಾದನೆಯ ಸಾರಾಂಶವನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ

(ಮೇಲಿನ ಆಪಾದನೆಯ ಸಾರಾಂಶವನ್ನು ಆರೋಪಿಗೆ ಓದಿ, ತಿಳಿ ಹೇಳಿದ ನಂತರ ಆರೋಪಿ ಅದನ್ನು ಅರ್ಥೈಸಿಕೊಂಡು ನಂತರ ನೀಡಿದ ಉತ್ತರಗಳನ್ನು ನಾನೇ ಸ್ವತಃ ದಾಖಲು ಮಾಡಿದ್ದೇನೆ. ಸದರಿ ದಾಖಲೆಯು ಸರಿಯಾದುದು ಮತ್ತು ನಿಜವಾದುದು ಎಂದು ದೃಡೀಕರಿಸುತ್ತೇನೆ.)

(ಕೆ.ಗೋಪಾಲಕೃಷ್ಣ)

ದಿನಾಂಕಃ 07.09.2023

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ,
ಸೋಮವಾರಪೇಟೆ.

## ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕೊಳ್ಳೇಗಾಲ

**ಉಪಸ್ಥಿತರುಃ   ಸಂತೋಷ ಕೊಠಾರಿ,**

**ಬಿ.ಎ.ಎಲ್., ಎಲ್.ಎಲ್.ಬಿ.,**

**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು , ಕೊಳ್ಳೇಗಾಲ**

## ಸಿ. ಸಿ. ನಂ. 612/2018

ಪಿರ್ಯಾದಿಃ   ಶ್ರೀ. ಮಹದೇವ, 36 ವರ್ಷ,
ಬಿನ್ ಕ್ಯಾತಯ್ಯ,
ಧನಗೆರೆ ಗ್ರಾಮ,
ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

(ಶ್ರೀ. ಡಿ. ಎಸ್. ಬಸವರಾಜು, ವಕೀಲರು, ಕೊಳ್ಳೇಗಾಲ.)

***ವಿರುದ್ಧ***

ಆರೋಪಿಃ   ಶ್ರೀ. ಪಿ. ನಂಜಯ್ಯ,
ಬಿನ್ ಲೇಟ್ ಪುಟ್ಟಮಲ್ಲಯ್ಯ ,
ಹೊಸ ಬೀದಿ, ಲಿಂಗಣಾಪುರ ,
ಕೊಳ್ಳೇಗಾಲ ಪಟ್ಟಣ,
ಚಾಮಜರಾಜನಗರ ಜಿಲ್ಲೆ.

ವೃತ್ತಿ ವಿಳಾಸಃ ಪಿ. ನಂಜಯ್ಯ,
ಬಿನ್ ಲೇಟ್ ಪುಟ್ಟಮಲ್ಲಯ್ಯ,
ಸಹಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆ,
ಕೆಸ್ತೂರು ಗ್ರಾಮ, ಯಳಂದೂರು ತಾಲ್ಲೂಕು,
ಚಾಮಜರಾಜನಗರ ಜಿಲ್ಲೆ.

(ಶ್ರೀ.ಸಂದೀಪ್ , ವಕೀಲರು, ಕೊಳ್ಳೇಗಾಲ.)

**::ದಂಡ ಪ್ರಕ್ರಿಯಾ ಸಂಹಿತೆ ವಿಧಿ 313 (1)(ಬಿ) ರಡಿ ದಾಖಲಿಸಿದ ಆರೋಪಿತರ ಹೇಳಿಕೆ ::**

ಪ್ರಶ್ನೆ: 1 ಪಿರ್ಯಾದುದಾರರ ಸಾಕ್ಷ್ಯವನ್ನು ತಿಳಿದುಕೊಂಡಿರುವಿರಾ?

ಉತ್ತರಃ

ಪ್ರಶ್ನೆ: 2 ಫ್ರಾಸಾ 1 ಮಹದೇವ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿಯಾದ ಪಿ. ನಂಜಯ್ಯ ರವರಿಗೆ ತಾವು ರೂ.2,00,000/- ರೂಪಾಯಿಗಳನ್ನು ಸಾಲವಾಗಿ ನಗದು ರೂಪದಲ್ಲಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆ: 3 ಫ್ರಾಸಾ 1 ರವರು ಮುಂದುವರೆದು, ಆರೋಪಿ ಸದರಿ ಸಾಲವನ್ನು ಮರುಪಾವತಿ ಮಾಡುವ ಸಲುವಾಗಿ ನನ್ನ ಹೆಸರಿಗೆ ಕೆನರಾ ಬ್ಯಾಂಕ್, ಯಳಂದೂರು ಶಾಖೆಯ ಚೆಕ್ ನಂ.161830 ದಿನಾಂಕಃ 27.04.2018 ರ ಚೆಕ್ ಅನ್ನು ರೂ.2,00,000/- ಗಳಿಗೆ ನೀಡಿರುತ್ತಾರೆ. ಸದರಿ ಚೆಕ್ ಅನ್ನು ನಗದೀಕರಿಸಿಕೊಂಡು ಸಾಲದ ಹಣವನ್ನು ಮರುಪಾವತಿ ಮಾಡಿಕೊಳ್ಳಬೇಕೆಂದು ಆರೋಪಿ ನನಗೆ ತಿಳಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆ: 4 ಫ್ರಾಸಾ 1 ರವರು ಮುಂದುವರೆದು, ದಿನಾಂಕಃ 27.04.2018 ರಂದು ಸದರಿ ಚೆಕ್ ಅನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೊಳ್ಳೇಗಾಲ ಶಾಖೆಯಲ್ಲಿ ನಗದೀಕರಿಸಲು ಸಲ್ಲಿಸಿದೆ. ಆದರೆ ಆರೋಪಿಯ ಬ್ಯಾಂಕ್ ನವರು "ಖಾತೆಯಲ್ಲಿ ಸಾಕಷ್ಟು ಹಣವಿಲ್ಲ " ಎಂಬ ಕಾರಣ ನೀಡಿ ಚೆಕ್ ಅಮಾನ್ಯಗೊಳಿಸಿ ದಿನಾಂಕಃ 02.05.2018 ರ ಮೆಮೋದೊಂದಿಗೆ ಹಿಂತಿರುಗಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

**ಸಿ. ಸಿ. ನಂ. 612/2018**

ಪ್ರಶ್ನೆಃ 5 ಫ್ರಾಸಾ 1 ರವರು ಮುಂದುವರೆದು, ದಿನಾಂಕಃ 25.07.2018 ರಂದು ಸದರಿ ಚೆಕ್ ಅನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೊಳ್ಳೇಗಾಲ ಶಾಖೆಯಲ್ಲಿ ನಗದೀಕರಿಸಲು ಪುನಃ ಸಲ್ಲಿಸಿದೆ. ಆದರೆ ಆರೋಪಿಯ ಬ್ಯಾಂಕ್ ನವರು "ಖಾತೆಯಲ್ಲಿ ಸಾಕಷ್ಟು ಹಣವಿಲ್ಲ " ಎಂಬ ಕಾರಣ ನೀಡಿ ಚೆಕ್ ಅಮಾನ್ಯಗೊಳಿಸಿ ಹಿಂತಿರುಗಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆಃ 6 ಫ್ರಾಸಾ 1 ರವರು ಮುಂದುವರೆದು, ಚೆಕ್ ಅಮಾನ್ಯಗೊಂಡು ಮರಳಿ ಬಂದ ಬಳಿಕ ದಿನಾಂಕಃ 27.07.2018 ರಂದು ಆರೋಪಿಗೆ ನಮ್ಮ ವಕೀಲರ ಮೂಲಕ ನೋಂದಾಯಿತ ಅಂಚೆಯಲ್ಲಿ ನೋಟೀಸ್ ಕಳುಹಿಸಿ ಚೆಕ್ ನ ಹಣವನ್ನು ಪಾವತಿ ಮಾಡಬೇಕೆಂದು ತಗಾದೆ ಮಾಡಿರುತ್ತೇನೆ ಆದರೂ ಸಹಾ ಆರೋಪಿಯು ಚೆಕ್ ನ ಬಾಬ್ತು ಹಣವನ್ನು ಪಾವತಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆಃ 7 ಫ್ರಾಸಾ 1 ರವರು ಮುಂದುವರೆದು, ಆರೋಪಿ ನನಗೆ ವಂಚನೆ ಮಾಡುವ ಉದ್ದೇಶದಿಂದ, ತಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದೇ ಇದ್ದರೂ ಚೆಕ್ ಅನ್ನು ನೀಡಿರುತ್ತಾರೆ ಮತ್ತು ಚೆಕ್ ಹಣವನ್ನು ಪಾವತಿಸಿರುವುದಿಲ್ಲ ಎಂದು ತಿಳಿಸಿ ನಿಪಿಃ 1 ರಿಂದ ನಿಪಿಃ 8 ನ್ನು ಗುರುತಿಸಿಕೊಂಡಿದ್ದಾರೆ. . ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆ: 8 ಮೇಲೆ ಓದಿ ಹೇಳಲಾದ ಪ್ರಶ್ನೆಗಳು ನಿಮಗೆ ಅರ್ಥವಾಯಿತೆ?

ಉತ್ತರಃ

ಪ್ರಶ್ನೆ: 9 ಈ ಮೊಕದ್ದಮೆ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ?

ಉತ್ತರಃ

ಪ್ರಶ್ನೆ: 10 ನಿಮ್ಮ ಪರವಾಗಿ ಅಭಿರಕ್ಷಣಾ ಸಾಕ್ಷ್ಯ ಇದೆಯೇ? ಇದ್ದರೆ ಮಂಡಿಸಿ.

ಉತ್ತರಃ

(ಮೇಲಿನ ಎಲ್ಲಾ ಪ್ರಶ್ನೆಗಳನ್ನು ಆರೋಪಿಗೆ ಓದಿ, ತಿಳಿ ಹೇಳಿದ ನಂತರ ಆರೋಪಿ ಅದನ್ನು ಅರ್ಥೈಸಿಕೊಂಡು ನಂತರ ನೀಡಿದ ಉತ್ತರಗಳನ್ನು ನಾನೇ ಸ್ವತಃ ದಾಖಲು ಮಾಡಿದ್ದೇನೆ. ಸದರಿ ದಾಖಲೆಯು ಸರಿಯಾದುದು ಮತ್ತು ನಿಜವಾದುದು ಎಂದು ದೃಡೀಕರಿಸುತ್ತೇನೆ.)

(ಸಂತೋಷ ಕೊಠಾರಿ )

ದಿನಾಂಕಃ 08.12.2021
ಸ್ಥಳಃ ಕೊಳ್ಳೇಗಾಲ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಕೊಳ್ಳೇಗಾಲ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕೊಳ್ಳೇಗಾಲ

**ಉಪಸ್ಥಿತರುಃ ಸಂತೋಷ ಕೊಠಾರಿ,**

**ಬಿ.ಎ.ಎಲ್., ಎಲ್.ಎಲ್.ಬಿ.,**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು , ಕೊಳ್ಳೇಗಾಲ**

# ಸಿ. ಸಿ. ನಂ. 625/2017

ಪಿರ್ಯಾದಿಃ ಶ್ರೀ. ರವಿಕುಮಾರ್, 42 ವರ್ಷ,
ಬಿನ್. ದೊ. ಮಲ್ಲಯ್ಯ @ ಮಲ್ಲಯ್ಯ ನಾಯಕ,
ವಾಸಃ ಪಾಳ್ಯ ಗ್ರಾಮ,
ಕೊಳ್ಳೇಗಾಲ ತಾಲ್ಲೂಕು,
ಚಾಮರಾಜನಗರ ಜಿಲ್ಲೆ.

(ಶ್ರೀ. ಎನ್. ಪ್ರಕಾಶ್, ವಕೀಲರು, ಕೊಳ್ಳೇಗಾಲ.)

***ವಿರುದ್ಧ***

ಆರೋಪಿಃ ಶ್ರೀ. ಕಮಲೇಶ್, 38 ವರ್ಷ,
ಬಿನ್ ಕಮಲಯ್ಯ,
ವಾಸಃ ಮುಖ್ಯ ರಸ್ತೆ, ಕುಣಗಳ್ಳಿ ಗ್ರಾಮ ಮತ್ತು ಪೋಸ್ಟ್,
ಕೊಳ್ಳೇಗಾಲ ತಾಲ್ಲೂಕು.

**ಮತ್ತು**

ಕಮಲೇಶ್ C/o ಶಿವಣ್ಣ,
ಅಧ್ಯಕ್ಷರು, ವಾಲ್ಮೀಕಿ ಸಂಘ,
ನಾಯಕರ ಸ್ಟ್ರೀಟ್, ಅಂಬಳೆ ಗ್ರಾಮ ಮತ್ತು ಪೋಸ್ಟ್,
ಯಳಂದೂರು ತಾಲ್ಲೂಕು.

(ಶ್ರೀ. ಪಿ. ಸತೀಶ್ , ವಕೀಲರು, ಟಿ. ನರಸೀಪುರ.)

**::ದಂಡ ಪ್ರಕ್ರಿಯಾ ಸಂಹಿತೆ ವಿಧಿ 313 (1)(ಬಿ) ರಡಿ ದಾಖಲಿಸಿದ ಆರೋಪಿತರ ಹೇಳಿಕೆ ::**

ಪ್ರಶ್ನೆಃ 1 ಪಿರ್ಯಾದುದಾರರ ಸಾಕ್ಷ್ಯವನ್ನು ತಿಳಿದುಕೊಂಡಿರುವಿರಾ?

ಉತ್ತರಃ

ಪ್ರಶ್ನೆಃ 2 ಫ್ರಾಸಾ 1 ಶ್ರೀ ರವಿಕುಮಾರ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿಯಾದ ಕಮಲೇಶ್ ರವರಿಗೆ ತಾವು ದಿನಾಂಕಃ 09.03.2016 ರಂದು ರೂ.9,00,000/- ರೂಪಾಯಿಗಳನ್ನು ಸಾಲವಾಗಿ ನಗದು ರೂಪದಲ್ಲಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆಃ 3 ಫ್ರಾಸಾ 1 ರವರು ಮುಂದುವರೆದು, ಆರೋಪಿ ಸದರಿ ಸಾಲವನ್ನು ಮರುಪಾವತಿ ಮಾಡುವ ಸಲುವಾಗಿ ನನ್ನ ಹೆಸರಿಗೆ ಐ.ಎನ್.ಜೆ.ವೈಶ್ಯ ಬ್ಯಾಂಕ್ ಲಿಮಿಟೆಡ್, ಕುಣಗಳ್ಳಿ ಶಾಖೆಯ ಚೆಕ್ ನಂ.216708 ದಿನಾಂಕಃ 16.03.2016 ರ ಚೆಕ್ ಅನ್ನು ರೂ.9,00,000/- ಗಳಿಗೆ ನೀಡಿರುತ್ತಾರೆ. ಸದರಿ ಚೆಕ್ ಅನ್ನು ನಗದೀಕರಿಸಿಕೊಂಡು ಸಾಲದ ಹಣವನ್ನು ಮರುಪಾವತಿ ಮಾಡಿಕೊಳ್ಳಬೇಕೆಂದು ಆರೋಪಿ ನನಗೆ ತಿಳಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆಃ 4 ಫ್ರಾಸಾ 1 ರವರು ಮುಂದುವರೆದು, ದಿನಾಂಕಃ 16.03.2016 ರಂದು ಸದರಿ ಚೆಕ್ ಅನ್ನು ಕೆನರಾ ಬ್ಯಾಂಕ್, ಪಾಳ್ಯ ಶಾಖೆಯಲ್ಲಿ ನಗದೀಕರಿಸಲು ಸಲ್ಲಿಸಿದೆ. ಆದರೆ ಆರೋಪಿಯ ಬ್ಯಾಂಕ್ ನವರು "ACCOUNT BLOCKED SITUATION COVERED IN 2125" ಎಂಬ ಕಾರಣ ನೀಡಿ ಚೆಕ್

ಅಮಾನ್ಯಗೊಳಿಸಿ ದಿನಾಂಕಃ 22.03.2016 ರ ಮೆಮೋದೊಂದಿಗೆ ಹಿಂತಿರುಗಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ



ಪ್ರಶ್ನೆಃ 5 ಫ್ರಾಸಾ 1 ರವರು ಮುಂದುವರೆದು, ಆರೋಪಿಯ ಕೋರಿಕೆಯ ಮೇರೆಗೆ ದಿನಾಂಕಃ 21.04.2016 ರಂದು ಸದರಿ ಚೆಕ್ ಅನ್ನು ಕೆನರಾ ಬ್ಯಾಂಕ್, ಪಾಳ್ಯ ಶಾಖೆಯಲ್ಲಿ ನಗದೀಕರಿಸಲು ಪುನಃ ಸಲ್ಲಿಸಿದೆ. ಆದರೆ ಆರೋಪಿಯ ಬ್ಯಾಂಕ್ ನವರು "ACCOUNT BLOCKED SITUATION COVERED IN 2125" ಎಂಬ ಕಾರಣ ನೀಡಿ ಚೆಕ್ ಅಮಾನ್ಯಗೊಳಿಸಿ ದಿನಾಂಕಃ 02.05.2016 ರ ಮೆಮೋದೊಂದಿಗೆ ಹಿಂತಿರುಗಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆಃ 6 ಫ್ರಾಸಾ 1 ರವರು ಮುಂದುವರೆದು, ಚೆಕ್ ಅಮಾನ್ಯಗೊಂಡು ಮರಳಿ ಬಂದ ಬಳಿಕ ದಿನಾಂಕಃ 25.05.2016 ರಂದು ಆರೋಪಿಗೆ ನಮ್ಮ ವಕೀಲರ ಮೂಲಕ ನೋಂದಾಯಿತ ಅಂಚೆಯಲ್ಲಿ ನೋಟೀಸ್ ಕಳುಹಿಸಿ ಚೆಕ್ ನ ಹಣವನ್ನು ಪಾವತಿ ಮಾಡಬೇಕೆಂದು ತಗಾದೆ ಮಾಡಿರುತ್ತೇನೆ. ಆದರೂ ಸಹಾ ಆರೋಪಿಯು ಚೆಕ್ ನ ಬಾಬ್ತು ಹಣವನ್ನು ಪಾವತಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆಃ 7 ಫ್ರಾಸಾ 1 ರವರು ಮುಂದುವರೆದು, ಆರೋಪಿ ನನಗೆ ವಂಚನೆ ಮಾಡುವ ಉದ್ದೇಶದಿಂದ, ತಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದೇ ಇದ್ದರೂ ಚೆಕ್ ಅನ್ನು ನೀಡಿರುತ್ತಾರೆ ಮತ್ತು ಚೆಕ್ ಹಣವನ್ನು ಪಾವತಿಸಿರುವುದಿಲ್ಲ ಎಂದು ತಿಳಿಸಿ ನಿಪಿಃ 1 ರಿಂದ ನಿಪಿಃ 7, ನಿಪಿಃ 1(ಎ), ನಿಪಿಃ 6(ಎ) ಮತ್ತು ನಿಪಿಃ 7(ಎ) ನ್ನು ಗುರುತಿಸಿಕೊಂಡಿದ್ದಾರೆ. . ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆಃ 8 ಮೇಲೆ ಓದಿ ಹೇಳಲಾದ ಪ್ರಶ್ನೆಗಳು ನಿಮಗೆ ಅರ್ಥವಾಯಿತೆ?

ಉತ್ತರಃ

ಪ್ರಶ್ನೆಃ 9 ಈ ಮೊಕದ್ದಮೆ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ?

ಉತ್ತರಃ

ಪ್ರಶ್ನೆಃ 10 ನಿಮ್ಮ ಪರವಾಗಿ ಅಭಿರಕ್ಷಣಾ ಸಾಕ್ಷ್ಯ ಇದೆಯೇ? ಇದ್ದರೆ ಮಂಡಿಸಿ.

ಉತ್ತರಃ

(ಮೇಲಿನ ಎಲ್ಲಾ ಪ್ರಶ್ನೆಗಳನ್ನು ಆರೋಪಿಗೆ ಓದಿ, ತಿಳಿ ಹೇಳಿದ ನಂತರ ಆರೋಪಿ ಅದನ್ನು ಅರ್ಥೈಸಿಕೊಂಡು ನಂತರ ನೀಡಿದ ಉತ್ತರಗಳನ್ನು ನಾನೇ ಸ್ವತಃ ದಾಖಲು ಮಾಡಿದ್ದೇನೆ. ಸದರಿ ದಾಖಲೆಯು ಸರಿಯಾದುದು ಮತ್ತು ನಿಜವಾದುದು ಎಂದು ದೃಡೀಕರಿಸುತ್ತೇನೆ.)

(ಸಂತೋಷ ಕೊಠಾರಿ )

ದಿನಾಂಕಃ 03.12.2021
ಸ್ಥಳಃ ಕೊಳ್ಳೇಗಾಲ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಕೊಳ್ಳೇಗಾಲ.